ಇಂದು ದಿಃ **20.03.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಶ್ರೀ ಸಿ ಎ ಕಟಕೋಳ ವಕೀಲರಿಂದ**

10. ನಿಪಿ.16 ನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯಲ್ಲಿ ನಮೂದಿಸಿರುವ ಸಾವಕ್ಕ ಹಾಗೂ ಸಾಕ್ಷಿಯ ವಿಳಾಸ ಕೆಲಗೇರಿಯ ವಾಸಿ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಮಾರುತಿ ಹಜಾರೆ ರವರ ಜೀವಂತ ಸದಸ್ಯರ ಧೃಡಿಕರಣ ಪತ್ರ ನಾನು ಪಡೆದುಕೊಂಡಿದ್ದೇನೆ. ಸಾಕ್ಷಿಗೆ ದಿಃ 30.06.2009 ರ ಮೃತ ಮಾರುತಿ ಹಜಾರೆ ರವರ ಕುಟುಂಬದ ಜೀವಂತ ಸದಸ್ಯರ ಧೃಡಿಕರಣ ಪತ್ರದ ಜರಾಕ್ಸ ಪ್ರತಿಯನ್ನು ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿಕೊಂಡ ಮೇರೆಗೆ **ನಿಡಿ.2** ಎಂದು ಗುರುತಿಸಲಾಯಿತು. ಸದರಿ ನಿಡಿ.2 ರಲ್ಲಿ ಮಾರುತಿ ಹಜಾರೆ ರವರ ವಿಳಾಸ ನವಲೂರು ಎಂದು ತೋರಿಸಲಾಗಿದೆ ಎಂದರೆ ಸರಿ.

11. ನಾನು ಹನುಮಂತಪ್ಪ ಫಕ್ಕಿರಪ್ಪ ಹಜಾರೆ ರವರ ಕುಟುಂಬದ ಜೀವಂತ ಸದಸ್ಯರ ಧೃಡಿಕರಣ ಪತ್ರ ತೆಗೆಸಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಮಾರುತಿ ಹಜಾರೆ ರವರ ಕುಟುಂಬದ ಜೀವಂತ ಸದಸ್ಯರ ಧೃಡಿಕರಣ ಪತ್ರವನ್ನು ತೆಗೆಸಿರುತ್ತೇನೆ ಎನ್ನುತ್ತಾರೆ. ಸದರಿ ದೃಡಿಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನೊ ಇಲ್ಲವೂ ನನಗೆ ನೆನಪಿಲ್ಲ. ಮಾರುತಿ ಹಜಾರೆ ರವರು ನನ್ನ ತಂದೆ ಅಲ್ಲ ಎಂದರೆ ಸರಿಯಲ್ಲ. ಮಾರುತಿ ಹಜಾರೆ ರವರು ತಿರಿಕೊಂಡ ನಂತರ ಸದರಿಯವರ ಕುಟುಂಬದ ಜೀವಂತ ಸದಸ್ಯರ ಧೃಡಿಕರಣ ಪತ್ರ ನೀಡುವಂತೆ ಕೋರಿ ನಾನು 2009 ರಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗೆ 1 ನೇ ಪ್ರತಿವಾದಿಯ ತಾಯಿ ಸಾವಕ್ಕ ರವರು ಸದರಿ ನಾನು ಅವರ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂದ ಇಲ್ಲ ಆದ್ದರಿಂದ ಆತನ ಪರವಾಗಿ ದೃಡಿಕರಣ ಪತ್ರ ನೀಡಬಾರದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸಾಕ್ಷಿ ಸಲ್ಲಿಸಿರಬಹುದು ಎನ್ನುತ್ತಾರೆ. ಅದೇ ರೀತಿ ಸದರಿ ನನ್ನ ಅರ್ಜಿಗೆ 1 ನೇ ಪ್ರತಿವಾದಿ ಸಹ ಅವರ ತಾಯಿ ಸಾವಕ್ಕ ರವರ ರೀತಿಯಲ್ಲಿ ತಕರಾರು ಸಲ್ಲಿಸಿದ್ದರು ಎಂದರೆ ಸಲ್ಲಿಸಿರಬಹುದು ನನಗೇ ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರು ಸದರಿ ತಕರಾರು ಸಲ್ಲಿಸಿದ್ದರು ಸಹ ನಾನು ಕಂದಾಯ ಅಧಿಕಾರಿಗಳೊಂದಿಗೆ

ಶಾಮಿಲಾಗಿ ನಿಪಿ.16 ಮತ್ತು ನಿಡಿ.2 ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

12. ನಾನು ಹಾಜರುಪಡಿಸಿದ ನಿಪಿ.21 ರಿಂದ 23 ಶಾಲಾ ದಾಖಲಾತಿಗಳನ್ನು ಸಹ ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.25 ನನ್ನ ಜನನ ಪ್ರಮಾಣ ಪತ್ರ ದಿಃ 05.06.2018 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ನಿಪಿ.25 ಜನನ ಪ್ರಮಾಣ ಪತ್ರವನ್ನು ಈ ದಾವೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.55/1ಅ ಮೂಲತಃ 1 ಎಕರೆ 30 ಗುಂಟೆ ಇದ್ದು ಅದರಲ್ಲಿ 2 ಭಾಗ ಆಗಿದೆ ಅದು ಈಗ 1 ಭಾಗ 1 ಎಕರೆ 24 ಗುಂಟೆ ಹಾಗೂ ಇನ್ನೊಂದು 6 ಗುಂಟೆ ಇದೆ ಎನ್ನುತ್ತಾರೆ. ದಿಃ 31.07.2002 ರಂದು 1 ನೇ ಪ್ರತಿವಾದಿ ಆತನ ಸಹೋದರ ಮೃತ ಫಕ್ಕಿರಪ್ಪ ಹಾಗೂ ಲಕ್ಷ್ಮವ್ವ ಪಾಂಡಪ್ಪ ಆರೇರ ರವರು ಸೇರಿ 10 ನೇ ಪ್ರತಿವಾದಿಗೆ ನಿಪಿ.18 ಖರೀದಿ ಪತ್ರದ ಅಡಿಯಲ್ಲಿ ಸರ್ವೆ ನಂ.55/1ಅ ರಲ್ಲಿ 1 ಎಕರೆ 24 ಗುಂಟೆ ಜಮೀನನ್ನು ಖರೀದಿ ನೀಡಿದರು. ಸದರಿ ಲಕ್ಷ್ಮವ್ವ ಪಾಂಡಪ್ಪ ಆರೇರ ಯಲ್ಲಪ್ಪ ಫಕ್ಕಿರಪ್ಪ ಹಜಾರೆ ರವರ ಮೊಮ್ಮಗಳು. 2002 ರಲ್ಲಿ ಸದರಿ ಖರೀದಿ ನೀಡಿದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2016-17 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ ಎನ್ನುತ್ತಾರೆ.

13. 10 ನೇ ಪ್ರತಿವಾದಿ 2002 ನೇ ಸಾಲಿನಲ್ಲಿ ಸದರಿ ಸರ್ವೆ ನಂ.55 ರಲ್ಲಿ ಜಮಿನು ಖರೀದಿಸಿದ ನಂತರ ಅದನ್ನು ಅಬಿವೃದ್ದಿ ಪಡಿಸಲು ಪ್ರಾರಂಬಿಸಿದರು ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ವೆ ನಂ.55 ನ್ನು ನೋಡಿರುತ್ತೇನೆ. ಸದರಿ ಸರ್ವೆ ನಂಬರ ಜಮೀನಿನಲ್ಲಿಯೇ ನಮ್ಮ ಮನೆ ಇದೆ. ಸದರಿ ಸರ್ವೆ ನಂಬರ ಜಮೀನನಲ್ಲಿ ನಮ್ಮ ಮನೆ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾನು ಮೊದಲಿನಿಂದಲೂ ನೋಡುತ್ತಾ ಬಂದಿರುತ್ತೇನೆ. 2002 ನೇ ಸಾಲಿನಲ್ಲಿ 10 ನೇ ಪ್ರತಿವಾದಿ ಸದರಿ ತಾನು ಖರೀದಿಸಿದ ಸ್ವತ್ತನ್ನು ಅಬಿವೃದ್ದಿ ಪಡಿಸುತ್ತಿದ್ದ ಕಾಲಕ್ಕೆ ನಮ್ಮ ಕುಟುಂಬದ ಜಮಿನಿನಲ್ಲಿ ಏಕೆ ಅಬಿವೃದ್ದಿ ಪಡಿಸುತ್ತಿದ್ದೀರಿ ಎಂದು ನಾನು 10 ನೇ ಪ್ರತಿವಾದಿಯನ್ನಾಗಲೀ ಅಥವಾ 1 ರಿಂದ 8 ನೇ ಪ್ರತಿವಾದಿಯರನ್ನಾಗಲಿ ಕೇಳಲಿಲ್ಲ. ಸದರಿ ಅಬಿವೃದ್ದಿ ಪಡಿಸುತ್ತಿದ್ದ ಕಾಲಕ್ಕೆ ನಾನು ತಕರಾರು ಮಾಡಲಿಲ್ಲ ಹಾಗೂ ನ್ಯಾಯಾಲಯದಲ್ಲಿ ದಾವೆಯನ್ನು ಸಹ ಸಲ್ಲಿಸಲಿಲ್ಲ ಎಂದರೆ ಸರಿ.

**ಪಿ.ಡಬ್ಲ್ಯೂ. 1**

14. ಸರ್ವೇ ನಂ.53 ಮೂಲತಃ 1 ಎಕರೇ 37 ಗುಂಟೆ ಇತ್ತು. ಸದರಿ ಜಮಿನು ಯಾವ ರೀತಿ ಬದಲಾವಣೆಯಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ದಾವೆ ದಾಖಲಿಸುವ ಮೊದಲು ದಾವಾ ಆಸ್ತಿ ಗಳಿಗೆ ಸಂಬಂದಿಸಿದಂತೆ ನಾನು ಯಾರ ಜೊತೆಯೂ ವ್ಯವಹಾರ ಮಾಡಲಿಲ್ಲ. ಈ ದಾವೆ ದಾಖಲಿಸಿದ ನಂತರ ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ನಾನು ವ್ಯವಹಾರ ಮಾಡಿರುತ್ತೇನೆ. ನಾನು ಸರ್ವೇ ನಂ.53 ಕ್ಕೆ ಸಂಬಂದಿಸಿದಂತೆ ವ್ಯವಹಾರ ಮಾಡಿರುತ್ತೇನೆ. ನಾನು ಸದರಿ ವ್ಯವಹಾರ ಮಂಜುನಾಥ ಬಡಕುರಿ ರವರೊಂದಿಗೆ ಮಾಡಿರುತ್ತೇನೆ. ಈಗ ಸಾಕ್ಷಿಗೆ ದಿಃ 13.06.2022 ರ ಬಿನ್ ಕಬ್ಜಾ ಖರೀದಿ ಕರಾರು ಪತ್ರದ ಆನ್ ಲೈನ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ **ನಿಡಿ.3** ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದಿಃ 10.05.2022 ರ ಬಿನ್ ಕಬ್ಜಾ ಖರೀದಿ ಕರಾರು ಪತರದ ರದ್ದತಿ ಪತ್ರದ ಆನ್ ಲೈನ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ **ನಿಡಿ.4** ಎಂದು ಗುರುತಿಸಲಾಯಿತು. ಈ ದಾವೆ ದಾಖಲಿಸುವ ಕಾಲಕ್ಕೆ ದಾವಾ ಸ್ವತ್ತುಗಳನ್ನು ಪ್ರತಿವಾದಿಗಳು ಪರಭಾರೆ ಮಾಡಬಾರದು ಎಂದು ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನಿಡಿ.3 ಕರಾರು ಪತ್ರ ಮಾಡಿಕೊಳ್ಳುವ ಕಾಲಕ್ಕೆ ಮಂಜುನಾಥ ಬಡಕುರಿ ಈ ದಾವೆ ಚಾಲ್ತಿಇದ್ದ ವಿಚಾರ ಹೇಳಿದ್ದೆ. ಸದರಿ ಈ ದಾವೆಯ ಬಗ್ಗೆ ನಿಡಿ.3 ರಲ್ಲಿ ಬರೆಸಿಲ್ಲ. ನನಗೆ ಈಗ ಒಂದು ವರ್ಷದ ಹಿಂದೆ ಅಪಘಾತವಾದಾಗಿನಿಂದ ನನ್ನ ಎಲ್ಲ ಯೋಗಕ್ಷೆಮವನ್ನು ಸದರಿ ಮಂಜುನಾಥ ಬಡಕುರಿ ನೊಡಿಕೊಳ್ಳುತ್ತಿದ್ದಾನೆ ಆದ್ದರಿಂದ ಅತ ನನಗೆ ಪರಿಚಯ. ಆತ ನನಗೆ ಮೊದಲಿನಿಂದಲೂ ಪರಿಚಯ. ಆತ ಮಹಾನಗರ ಪಾಲಿಕೆಯ ಸದಸ್ಯನಾಗಿದ್ದು ಸಮಾಜಿಕ ಕೆಲಸ ಮಾಡುತ್ತಾನೆ. ಸದರಿ ಮಂಜುನಾಥ ಬಡಕುರಿ ಸರ್ವೇ ನಂ53 ಕ್ಕೆ ಸಂಬಂದಿಸಿದಂತೆ 1 ರಿಂದ 8 ನೇ ಪ್ರತಿವಾದಿಯೊಂದಿಗೆ ಜಗಳ ಮಾಡಿರುತ್ತಾನೆ ಎಂದರೆ ಸಾಕ್ಷಿ ಜಗಳವನ್ನು ನಾನು ಮಾಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ಸದರಿ ಜಮೀನಿಗೆ ಹೋದಾಗ ನನ್ನ ಜೊತೆ ಜಗಳ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಮಂಜುನಾಥ ಬಡಕುರಿ ರವರು ಸದರಿ ಜಗಳ ಮಾಡಿದಕ್ಕೆ 1 ನೇ ಪ್ರತಿವಾದಿಯ ಅಕ್ಕ ಮಂಜುನಾಥ ಬಡಕುರಿ ರವರ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿಕಾರವಾಗಿ 1 , 4,7 ಮತ್ತು 8 ಹಾಗೂ ಸುಧಾ ಎಂಬುವವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಂಜುನಾಥ ಬಡಕುರಿ ರಾಜಕಿಯ ಪ್ರಭಾರ ಇರುವ ವ್ಯಕ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆ ಸಾಮಾಜಿಕ ಸೇವೆ ಮಾಡುವ ವ್ಯಕ್ತಿ ಎನ್ನುತ್ತಾರೆ. ಸದರಿ ಮಂಜುನಾಥ ಬಡಕುರಿ ರವರ ಪ್ರಭಾರ ಬಳಸಿ ನಾನು ಪ್ರತಿವಾದಿ ನಂ.1 ರಿಂದ 8 ರವರಿಗೆ ಆಗಾಗ ತೊಂದರೆ ನೀಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ

ನನಗೆ ತೊಂದರೆ ನೀಡುತ್ತಿದ್ದಾರೆ ಎನ್ನುತ್ತಾರೆ. ಸದರಿಯವರು ನನಗೆ ತೊಂದರೆ ನೀಡುತಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ದಾವಾ ಸ್ವತ್ತುಗಳು ಯಾವತ್ತು ನನ್ನ ಸ್ವಾಧೀನಾನುಭೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ. ಹಾಗೂ ದಾವಾ ಸ್ವತ್ತುಗಳನ್ನು ನಾನು ಯಾವುದೇ ದಿನ ಸಾಗುವಳಿ ಮಾಡಿಲ್ಲ ಎಂದರೆ ಸಾಕ್ಷಿ ನಾನು ಕೂಲಿ ಮಾಡುತ್ತೇನೆ ನನ್ನ ಚಿಕ್ಕಪ್ಪಂದಿರು ಸಾಗುವಳಿ ಮಾಡುತ್ತಾರೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ಮ್ಯೂಟೇಷನ ಎಂಟ್ರಿ, ತಹಶೀಲ್ದಾರ ರವರ ಆದೇಶ ಹಾಗೂ ಉಪವಿಭಾಗಾಧಿಕಾರಿ ರವರ ಆದೇಶಗಳ ಆಧಾರದ ಮೇಲೆ ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು 1 ರಿಂದ 8 ನೇ ಪ್ರತಿವಾದಿಗಳ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂದ ಇಲ್ಲದಿದ್ದರಿಂದ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ.18, 30 ರಿಂದ 34 ಹಾಗೂ 36 ಖರೀದಿ ಪತ್ರಗಳು ಕಾನೂನುಬದ್ದವಾದ ಖರೀದಿ ಪತ್ರಗಳು ಎಂದರೆ ಸರಿಯಲ್ಲ. ನಿಪಿ.35 ಬಕ್ಷಿಸ ಪತ್ರ ಸಹ ಕಾನೂನುಬದ್ದ ಬಕ್ಷಿಸ ಪತ್ರ ಎಂದರೆ ಸರಿಯಲ್ಲ.

16. ನಾನು ಸರಾಯಿ ಕುಡಿಯುವ ದುಶ್ಚಟ ಹೊಂದಿದ್ದೇನೆ ಎಂದರೆ ಸಾಕ್ಷಿ ರಾತ್ರಿ ಸಮಯದಲ್ಲಿ ಮಾತ್ರ ಕುಡಿಯುತ್ತೇನೆ ಎನ್ನುತ್ತಾರೆ. ನಾನು ಜೂಜಾಟ ಆಡುವ ಹವ್ಯಾಸ ಹೊಂದಿದ್ದೇನೆ ಎಂದರೆ ಸರಿಯಲ್ಲ. ಸದರಿ ನನ್ನ ದುಶ್ಚಟಗಳಿಗೆ ಹಣ ಬೇಕು ಎಂದು 1 ರಿಂದ 8 ನೇ ಪ್ರತಿವಾದಿಗಳಿಗೆ ಆಗದವರ ಮಾತು ಕೇಳಿ ನಾನು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಲು ನನಗೆ ಮಂಜುನಾಥ ಬಡಕುರಿ ಕುಮ್ಮಕ್ಕು ನೀಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 8 ನೇ ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಗಳಲ್ಲಿ ಪಾಲು ಕೇಳಿ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂ.53 ರ ಆರ್ ಟಿ ಸಿ ಯಲ್ಲಿ ನಾನು ಸಾವಕ್ಕ ರವರ ಮಗ ಎಂದು ಸುಳ್ಳು ಹೇಳಿ ದಾಖಲೆಗಳನ್ನು ಸೃಷ್ಟಿಸಿ ನನ್ನ ಹೆಸರನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 15 ನೇ ಪ್ರತಿವಾದಿ ಶ್ರೀ ವಿ ಎಸ ಎಸ ವಕೀಲರಿಂದ**

17. ದಾವಾ ಸ್ವತ್ತುಗಳು ನನಗೆ ಸಂಬಂದಿದ್ದವು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 10 ರವರಿಂದ ಪ್ರತಿವಾದಿ ನಂ.15 ರವರು ದಾವಾ ಸ್ವತ್ತುಗಳ ಪೈಕಿ ಜಮಿನನ್ನು

**ಪಿ.ಡಬ್ಲ್ಯೂ. 1**

ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಸರ್ವೇ ನಂ.55 ರಲ್ಲಿ ನಿರ್ಮಾಣ ಮಾಡಿದ ಪ್ಲಾಟಗಳ ಪೈಕಿ ಪ್ಲಾಟ ನಂ.5 ನೇದ್ದನ್ನು 15 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಇರಬಹುದು. ಹಾಗೂ ಸದರಿ ಖರೀದಿಯನ್ನು ನೊಂದಾಯಿತ ಪತ್ರದ ಮೂಲಕ ಮಾಡಿರುತ್ತಾರೆ ಎಂದರೆ ಇರಬಹುದು. ಹಾಗೂ ಸದರಿ ಪ್ಲಾಟ ನಂ.5 ಅನ್ನು 15 ನೇ ಪ್ರತಿವಾದಿಯ ಸ್ವಾಧಿನದಲ್ಲಿ ಇದೆ ಎಂದರೆ ಸರಿ. ಸದರಿ ಪ್ಲಾಟ ನಂ.5 ಅನ್ನು ಪ್ರತಿವಾದಿ ನಂ.15 ರವರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಸರ್ವೇ ನಂ.55 ರಲ್ಲಿ ಜಮಿನು ಖರೀದಿಸಿದ ನಂತರ ಎನ್ ಎ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಅವರಿಗೆ ಯಾವ ರೀತಿ ಬೇಕು ಆ ರೀತಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಖರೀದಿಸಿದ ಸ್ವತ್ತಿಗೆ 15 ನೇ ಪ್ರತಿವಾದಿಯ ಹೆಸರು ದಾಖಲಾಗಿದೆ ಎಂದರೆ ಆಗಿರಬಹುದು. 15 ನೇ ಪ್ರತಿವಾದಿ ಖರೀದಿಸಿದ ಸ್ವತ್ತಿಗೆ ಸಂಬಂದಿಸಿದಂತೆ 10 ನೇ ಪ್ರತಿವಾದಿ ಸದರಿ ಸ್ವತ್ತಿಗೆ ಸಂಬಂದಿಸಿದಂತೆ ಯಾವುದಾದರೂ ತಂಟೆ ತಕರಾರು ಬಂದರೇ ಬಗೆಹರಿಸಿಕೊಡುತ್ತೇನೆ ಎಂದು ಖರೀದಿ ಪತ್ರದಲ್ಲಿ ಬರೆದುಕೊಟ್ಟಿರುತ್ತಾರೆ ಎಂದರೆ ಇರಬಹುದು. 10 ನೇ ಪ್ರತಿವಾದಿ ಸರ್ವೇ ನಂ.55 ರಲ್ಲಿ ಜಮಿನನ್ನು ಖರೀದಿಸಿದ ನಂತರ ಸದರಿ ಖರೀದಿಸಿದ ಜಮಿನಿನ ಸಂಪೂರ್. ಮಾಲಿಕರಾಗಿರುತ್ತಾರೆ ಎಂದರೆ ಸಾಕ್ಷಿ ಅದು ಮೂಲತಃ ನಮ್ಮ ಮಾಲಿಕತ್ವದ ಜಮಿನು ಆಗಿತ್ತು ಎನ್ನುತ್ತಾರೆ. 15 ನೇ ಪ್ರತಿವಾದಿ ಸದರಿ ಪ್ಲಾಟ ನಂ.5 ಅನ್ನು ಎನ್ ಎ ಆಗಿದ್ದನ್ನು ಖಾತ್ರಿ ಪಡಿಸಿಕೊಂಡು ಖರೀದಿಸಿರುತ್ತಾರೆ ಎಂದರ ಇರಬಹುದು ಎನ್ನುತ್ತಾರೆ. ಈ ದಾವೆಯಲ್ಲಿ ನಾನು ಕೇಳಿದ ಪರಿಹಾರ 15 ನೇ ಪ್ರತಿವಾದಿಗೆ ಸಂಬಂದಿಸಿದ್ದು ಅಲ್ಲ ಎಂದರೆ ಸಾಕ್ಷಿ 10 ನೇ ಪ್ರತಿವಾದಿಗೆ ಸಂಬಂದಿಸಿದೆ ಎನ್ನುತ್ತಾರೆ. ಪ್ರತಿವಾದಿ ನಂ.15 ರವರಿಗೆ ನಾನು ಕೇಳಿರುವ ಪರಿಹಾರ ಸಂಬಂದಿಸಿಲ್ಲ ಅದ್ದರಿಂದ ಅವರ ವಿರುದ್ದ ದಾವೆಯನ್ನು ವಜಾಗೊಳಿಸಬೇಕೆಂದು ಎಂದರೆ ಸರಿಯಲ್ಲ.

( ಪ್ರತಿವಾದಿ ನಂ.18 ಹಾಗೂ 10 ರವರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು , ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,